■ ವಿಶಾಖ ಎನ್.

# ಪೂನಂ ಸಾವಿನ ಪ್ರಹಸನಾನಂತರ

ಸಾಮಾಜಿಕ ಮಾಧ್ಯಮಗಳಲ್ಲಿ ಕಳೆದ ಕೆಲವು ದಿನಗಳಲ್ಲಿ ಪೂನಂ ಪಾಂಡೆ ಹೆಸರು ಮತ್ತೆ ತೇಲುತ್ತಾ ಮೇಲೆದ್ದಿತು. ಬದುಕಿನುದ್ದಕ್ಕೂ ಪ್ರಚಾರದ ಗಿಮಿಕ್‌ಗಳನ್ನೇ ಮಾಡುತ್ತಾ ಬಂದಿರುವ ಪೂನಂ, ಗರ್ಭಕಂಠದ ಕ್ಯಾನ್ಸರ್‌ಗೆ ಬಲಿಯಾದರು ಎಂಬರ್ಥದ ಭಾವುಕ ಪೋಸ್ಟ್ ಒಂದು ಅವರದ್ದೇ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಕಾಣಿಸಿಕೊಂಡಿತು. ಅವರ ಸಾವು, ಅಂತಿಮ ಸಂಸ್ಕಾರದ ವಿವರ ಕೂಡ ಅದರಲ್ಲಿ ಇತ್ತು. ಸಾವಿನ ವಿಷಯದಲ್ಲಿ ಯಾರೂ ತಮಾಷೆ ಮಾಡಲಾರರು ಎಂದೇ ಬಹುಸಂಖ್ಯಾತರು ಭಾವಿಸಿ, ಪೂನಂ ಅವರಿಗೂ ಒಂದು ಸಂತಾಪ ಸೂಚಿಸಿದ್ದರು. ಆದರೆ, ಮರುದಿನ ಪೂನಂ ಪಾಂಡೆ ಒಂದು ವಿಡಿಯೊ ಮೂಲಕ ಪ್ರತ್ಯಕ್ಷರಾದರು. ಸಾವಿನ ನಾಟಕವಾಡಿದ್ದಕ್ಕೆ ಕ್ಷಮೆ ಕೇಳಿ, 'ಗರ್ಭಕಂಠದ ಕ್ಯಾನ್ಸರ್ ಕುರಿತೇ ಎಲ್ಲರೂ ಮಾತನಾಡುತ್ತಿದ್ದೇವಲ್ಲ' ಎಂದು ಸಾಮಾಜಿಕ ಕಾಳಜಿಯ ಮಾತನಾಡಿದರು.

ಪೂನಂ ಪ್ರಚಾರದ ಈ ವಿಲಕ್ಷಣ ಸ್ಟಂಟ್ ಕಂಡು ಈಗ ಮೀಮ್‌ಗಳು ಹರಿದಾಡತೊಡಗಿವೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ 'ವರ್ಸ್ಟ್ ಸೋಷಿಯಲ್ ಮೀಡಿಯಾ ಕ್ಯಾಂಪೇನ್ ಪ್ರಶಸ್ತಿ' ಸ್ವೀಕರಿಸುತ್ತಿರುವ ಫೋಟೊ, ನಿಜಕ್ಕೂ ಪೂನಂ ಅವರಿಗೆ ಆರೋಗ್ಯದಲ್ಲಿ ಏರುಪೇರು ಆದರೆ ವೈದ್ಯರ ಪ್ರತಿಕ್ರಿಯೆ ಹೇಗಿದ್ದೀತು ಎನ್ನುವುದಕ್ಕೆ ನಟ ನಾನಾ ಪಾಟೇಕರ್ 'ಹೋಗತ್ಲಾಗಿ' ಎಂಬಂತೆ ಸಂಜ್ಞೆ ಮಾಡುತ್ತಿರುವ ಫೋಟೊ, 'ಮೈ ಮರ್ ಭೀ ಜಾತಾ ತೋ ಭಿ ನಹೀ ಮರ್‍ತಾ' (ನಾನು ಸತ್ತರೂ ಸಾಯುವುದಿಲ್ಲ) ಎಂಬ ಸಿನಿಮಾ ಸಂಭಾಷಣೆ ಹೇಳಿದ್ದ ನಟ ಪರೇಶ್ ರಾವಲ್ ಫೋಟೊ... ಇವನ್ನೆಲ್ಲ ಸಾಮಾಜಿಕ ಮಾಧ್ಯಮದಲ್ಲೇ ಮೀಮ್ ರೂಪದಲ್ಲಿ ಕಂಡು ಜನ ಮುಸಿಮುಸಿ ನಗುತ್ತಿದ್ದಾರೆ.

ಮೀಮ್ ವಿಡಿಯೊಗಳಿಂದ ಜನಪ್ರಿಯವಾಗಿರುವ ಕನ್ನಡದ ಚಾನಲ್ ವಿಕ್ಕಿಪಿಡಿಯಾ ಕೂಡ, ವಂಚನೆ ಪ್ರಕರಣವೊಂದರ ಅಣಕು ವಿಡಿಯೊ ಮಾಡಿತು. ಅದರಲ್ಲಿ ಹಣ ಪೀಕುವ ವ್ಯಕ್ತಿ ತನ್ನ ತಾಯಿಗೆ ಕ್ಯಾನ್ಸರ್ ಆಗಿದೆ ಎಂದು ಭಾವುಕತೆಯ ನೆಲೆಗಟ್ಟಿನಲ್ಲಿ ಮಾತನಾಡುತ್ತಾನೆ. ಹಣ ಕೊಡುವ ಧಾರಾಳಿ, 'ನಿನ್ನ ತಾಯಿಯ ಹೆಸರೇನು?' ಎಂದು ಕೇಳುತ್ತಾನೆ. ಆಗ ವಂಚಕ 'ಪೂನಂ ಪಾಂಡೆ' ಎನ್ನುತ್ತಾನೆ.

ಸಾವು ಸೂತಕವನ್ನು ಸೃಷ್ಟಿಸುತ್ತಾ ಬಂದಿದ್ದನ್ನು ಕಂಡಿದ್ದ ಜನರಿಗೆ ಪೂನಂ ಪಾಂಡೆ ಅದನ್ನೂ ತಮಾಷೆಯ ಸರಕಾಗಿಸಿರುವುದು ಹೊಸಕಾಲದ ಚೋದ್ಯ. ■






## 'ರಾಮಾಯಣ'ದ ಮಾತಿಗೇ ಸಂಶೋಧನಾ ತಂಡ

ನಿತೇಶ್ ತಿವಾರಿ 'ರಾಮಾಯಣ' ಸಿನಿಮಾ ನಿರ್ದೇಶಿಸಲು ಸಿದ್ಧತೆ ನಡೆಸುತ್ತಿರುವ ಸುದ್ದಿ ಹೊಸತೇನೂ ಅಲ್ಲ. ಅವರು ರಾಮನ ಪಾತ್ರಧಾರಿಯ ಸಂಭಾಷಣೆಯ ಉಚ್ಚಾರ, ಪದ ಬಳಕೆಯ ಹದದಲ್ಲಿ ತುಸುವೂ ಅಪಚಾರವಾಗಕೂಡದು ಎಂದು ಹೆಚ್ಚುವರಿ ನಿಗಾ ವಹಿಸಿರುವುದು ಹೊಸ ಸುದ್ದಿ.

ಹೊಸಕಾಲದ ತಂತ್ರಜ್ಞಾನ ಬಳಸಿ ರಾಮಾಯಣವನ್ನು ತೆರೆಮೇಲೆ ಚಂದಗಾಣಿಸುವ ಸಾಧ್ಯತೆಯಂತೂ ಇದೆ. ಆದರೆ, ನಿತೇಶ್ ರಾಮನ ಪಾತ್ರಧಾರಿಯೂ ಸೇರಿದಂತೆ ಎಲ್ಲರೂ ಆಡುವ ಮಾತಿನಲ್ಲಿ ಹಳೆಯ ಶಿಷ್ಟಾಚಾರ ಉಳಿಸಿಕೊಳ್ಳಲು ಪ್ರಯತ್ನ ಹಾಕುತ್ತಿದ್ದಾರೆ. ಸಂಭಾಷಣೆ ಹಾಗಿರಲಿ, ರಾಮನ ಮಾತು ಹೇಗಿರಬೇಕು, ಅವನು ಹೊಮ್ಮಿಸುವ ಧ್ವನಿ ಯಾವ ರೀತಿ ಇರಬೇಕು ಎಂದೆಲ್ಲ ಸಂಶೋಧನೆ ಮಾಡಲು ತಂಡವೊಂದನ್ನು ನಿಯೋಜಿಸಿದ್ದಾರೆ. ಆ ತಂಡವು ರಾಮನ ಪಾತ್ರದಲ್ಲಿ ಕಾಣಿಸಿಕೊಳ್ಳಲಿರುವ ನಟ ರಣಬೀರ್ ಕಪೂರ್ ಅವರೊಟ್ಟಿಗೆ ಕೆಲಸ ಮಾಡಲಿದೆ.

'ಅನಿಮಲ್' ಹಿಂದಿ ಸಿನಿಮಾ ಯಶಸ್ಸಿನ ನಂತರ ರಣಬೀರ್ ಕಪೂರ್ ನಟನಾಗಿ ತಾವು ಎಷ್ಟು ತನ್ಮಯ ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ಆದರೆ, ರಾಮನ ಪಾತ್ರದಲ್ಲಿ ಗೆಲ್ಲುವುದು ಸುಲಭದ ಮಾತಲ್ಲ. ಇದುವರೆಗೆ ರಣಬೀರ್ ಸಂಭಾಷಣೆ ಹೇಳುತ್ತಾ ಬಂದಿರುವ ಕ್ರಮವೇ ಬೇರೆ. ಪೌರಾಣಿಕ ಸಿನಿಮಾದಲ್ಲಿ ಅವರು ಆಡಬೇಕಿರುವ ಮಾತಿನ ಶೈಲಿಯೇ ಬೇರೆ. ಅದಕ್ಕೇ ನಿತೇಶ್ ಹೆಚ್ಚಿನ ಹೋಂವರ್ಕ್ ಅನ್ನು ನಟನಿಗೂ ನೀಡಿದ್ದಾರೆ.

ಸೀತೆಯ ಪಾತ್ರದಲ್ಲಿ ಸಾಯಿ ಪಲ್ಲವಿ ನಟಿಸಲಿದ್ದು, ರಾವಣನಾಗಿ ಯಶ್ ನಟಿಸುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಆದರೆ, ಯಶ್ ಇನ್ನೂ ಹಸಿರು ನಿಶಾನೆ ತೋರಿಸಿಲ್ಲ. ■